KATK010000032021



## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು

## ವಿಶೇಷ ಮೊಕದ್ದಮೆ.2/2021

ಪ್ರಾ.ಸಾ. ಃ **6**

ದೋ.ಸಾ. ಃ **10**

ದಿ.**27.02.2026**

| | |
|---|---|
| ಹೆಸರು | ಃ ಹೆಚ್.ಎಸ್ ನಾಗಭೂಷಣ |
| ತಂದೆಯ ಹೆಸರು | ಃ ಲೇಟ್ ಹೆಚ್.ಆರ್ ನಾಗರಾಜು |
| ವಯಸ್ಸು | ಃ **52** ವರ್ಷ |
| ಉದ್ಯೋಗ | ಃ ಪ್ರಭಾರ ಪಿ.ಡಿ.ಒ, ಗಳಿಗೇನಹಳ್ಳಿ ಗ್ರಾಮ ಪಂಚಾಯತಿ |
| ವಾಸಸ್ಥಳ | ಃ ತುಮಕೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. 2017 ರಿಂದ 2022 ರವರೆಗೆ ನಾನು ಊರ್ಡಿಗೆರೆ ಗ್ರಾಮಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆನು.
2. ದಿನಾಂಕ 28.10.2020 ರಂದು ಅಮ್ಜದ್ ಖಾನ್ ರವರು ವಾಸವಿರುವ ಬಾಡಿಗೆ ಮನೆಯ ಖಾತಾ ಎಕ್ಸ್ ಟ್ರಾಕ್ಟ್ ಮತ್ತು ಆರೋಪಿ ನಾರಾಯಣಪ್ಪನ ವಾಸದ ಮನೆಯ ಖಾತಾ ಎಕ್ಸ್ ಟ್ರಾಕ್ಟ್ ನೀಡಲು ಆರಕ್ಷಕ ಉಪನಿರೀಕ್ಷಕರು ಪತ್ರಗಳನ್ನು ಬರೆದಿರುತ್ತಾರೆ. ಆ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ.27 ಮತ್ತು 28 ಎಂದು ಗುರುತಿಸಲಾಯಿತು. ದಿನಾಂಕ 19.11.2020 ರಂದು ಅಮ್ಜದ್ ಖಾನ್ ವಾಸವಿರುವ ಬಾಡಿಗೆ ಮನೆ, ರುದ್ರೇಶ್ ತಂದೆ ಗುರುಚೆನ್ನಬಸಪ್ಪ ರವರಿಗೆ ಸೇರಿದ್ದು ಅದರ ಖಾತಾ ಎಕ್ಸ್ ಟ್ರಾಕ್ಟ್ ಅನ್ನು ನೀಡಿರುತ್ತೇನೆ. ಆ ಪತ್ರ ಮತ್ತು ಖಾತಾ ಎಕ್ಸ್ ಟ್ರಾಕ್ಟ್ ಅನ್ನು ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ.29 ಮತ್ತು 30 ಎಂದು ಗುರುತಿಸಲಾಯಿತು. ನಿಶಾನೆ ಪಿ.29 ಮತ್ತು 30 ರಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ.29(ಎ) ಮತ್ತು 30(ಎ) ಎಂದು ಗುರುತಿಸಲಾಯಿತು. ಲಕ್ಷ್ಮಮ್ಮ ಕೋಂ ನಾರಾಯಣಪ್ಪ ರವರ ಹೆಸರಿನಲ್ಲಿರುವ ಮನೆಯ ಖಾತಾ ಎಕ್ಸ್

ಟ್ರಾಕ್ಟ್ ಅನ್ನು ನೀಡಿದ್ದು, ಪತ್ರ ಮತ್ತು ಖಾತಾ ಎಕ್ಸ್ ಟ್ರಾಕ್ಟ್ ಗಳನ್ನು ನಿಶಾನೆ ಪಿ.31 ಮತ್ತು 32 ಎಂದು ಗುರುತಿಸಲಾಯಿತು. ನಿಶಾನೆ ಪಿ.31 ಮತ್ತು 32 ರಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ.31(ಎ) ಮತ್ತು 32(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿಃ**

**3.** ಕಾಂತಣ್ಣನ ಮನೆಯ ಮುಂದೆ ಏನು ಸ್ವತ್ತು ಇದೆ ಎಂದು ನನಗೆ ಗೊತ್ತಿಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ**

**4.** ನನಗೆ ಅರ್ಜಿ ಕೊಡುವಾಗ ನಾರಾಯಣಪ್ಪ ತಂದೆ ಲೇಟ್ ಪಾಪಣ್ಣ ರವರ ಖಾತಾ ಎಕ್ಸ್ ಟ್ರಾಕ್ಟ್ ಕೇಳಿದ್ದರು. ಲಕ್ಷ್ಮಮ್ಮನ ಖಾತಾ ಎಕ್ಸ್ ಟ್ರಾಕ್ಟ್ ಕೊಡಲು ಕೇಳಿರಲಿಲ್ಲ. ನಾರಾಯಣಪ್ಪ ತಂದೆ ಲೇಟ್ ಪಾಪಣ್ಣ ರವರ ಹೆಸರಿಗೆ ಸ್ವತ್ತು ಇರುವ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ನಾನು ನಾರಾಯಣಪ್ಪನ ಖಾತಾ ಎಕ್ಸ್ ಟ್ರಾಕ್ಟ್ ಕೇಳಿದಾಗ ಅವರ ಹೆಂಡತಿಯ ಹೆಸರಿನಲ್ಲಿರುವ ಖಾತಾ ಎಕ್ಸ್ ಟ್ರಾಕ್ಟ್ ಕೊಟ್ಟಿದ್ದೇನೆ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು